ಕೈಗೊಂಡಿರುವುದಿಲ್ಲ. ಒಳ್ಳೆಯ ಕೆಲಸ ಮಾಡಿದ ಐಯಪ್ಪನವರ ಮೇಲೆ ಏಕಾಏಕಿ ಹಲ್ಲೆ ನಡೆಸಿದ ರಾಜೀವ್ ಎಂಬ ಪೋಲಿಸ್ ಅಧಿಕಾರಿ ವಿರುದ್ಧ ಏಕೆ ಕ್ರಮ ಕೈಗೊಳ್ಳಲಿಲ್ಲ. ಬಾರ್ ಅಸೋಸಿಯೇಷನ್ನಿನ ಕಂಪ್ಲೇಂಟ್‌ಗೂ ಸರ್ಕಾರ ಏಕೆ ಕ್ರಮ ಜರುಗಿಸಲಿಲ್ಲ? ಇದರ ಬಗ್ಗೆ ಸರ್ಕಾರ ಏನು ಹೇಳುತ್ತದೆ ಎಂದು ತಮ್ಮ ಮೂಲಕ ಕೇಳುತ್ತಿದ್ದೇನೆ.

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೇ, ನಡೆದಿರುವ ಘಟನೆ ಬಗ್ಗೆ ರಾಜ್ಯದ ನಾನಾ ಭಾಗಗಳಲ್ಲಿ ವಕೀಲರು ಪ್ರತಿಭಟನೆ ಮಾಡಿರುವುದೂ ಕೂಡ ಇದೆ. ಮತ್ತು ಇಲಾಖೆಯ ಹಿರಿಯ ಅಧಿಕಾರಿಗಳಿಗೂ ಕೂಡ ಪುಕಾರು ಕೊಟ್ಟಿದ್ದಾರೆ. ಮಾನ್ಯ ಗೃಹಸಚಿವರ ಗಮನಕ್ಕೂ ಕೂಡ ತಂದಿದ್ದಾರೆ. ಏತನ್ಮಧ್ಯೆ ಈ ಹಲ್ಲೆಗೊಳಗಾದ ವಕೀಲರು ಹುಣಸೂರು ನ್ಯಾಯಾಲಯದಲ್ಲಿ ಒಂದು ಪ್ರೈವೇಟ್ ಕಂಪ್ಲೇಂಟ್‌ನ್ನು ಫೈಲ್‌ಮಾಡುವುದರ ಮುಖಾಂತರ ಅಲ್ಲಿ ಕೇಸ್ ದಾಖಲು ಮಾಡಿ ಆ ಸಬ್ ಇನ್ಸ್‌ಪೆಕ್ಟರ್ ಮೇಲೆ ಸಮನ್ಸ್ ಕೂಡ ಇಷ್ಯೂ ಮಾಡಿದ್ದಾರೆ. ಮತ್ತು ಈಗ ಇಲಾಖೆ ವಿಚಾರಣೆ ಮಾಡುವುದಕ್ಕೆ ಇರುವುದು ಇಲಾಖೆಯ ವತಿಯಿಂದ ಇದನ್ನು ಪರಿಶೀಲನೆ ಮಾಡುತ್ತಿದ್ದಾರೆ. ಪರಿಶೀಲನೆ ಮಾಡಿ ತಪ್ಪಿತಸ್ಥರಾಗಿರುವ ಅಧಿಕಾರಿ ಬಹುಶಃ ಎಲ್ಲಿಯಾದರೂ ಇಲಾಖೆಯಲ್ಲಿ ಇದನ್ನು ಪರಿಶೀಲನೆ ಮಾಡದೇ ಇರುವ ಸಂದರ್ಭದಲ್ಲಿ ಅವರು ಮಾಡಿರುವ ತಪ್ಪು ಸಾಬೀತಾದರೆ ಖಂಡಿತವಾಗಿಯೂ ನಾವು ಕ್ರಮವನ್ನು ಕೈಗೊಳ್ಳುತ್ತೇವೆ.

ಊ) ಸೂರತ್ಕಲ್ ಕ್ಷೇತ್ರದ ವ್ಯಾಪ್ತಿಯಲ್ಲಿಎಂ.ಆರ್.ಪಿ.ಎಲ್.ಸಂಸ್ಥೆಯವರಿಗಾಗಿ ಜಮೀನು ಬಿಟ್ಟವರ ಪರಿಸ್ಥಿತಿ ಕುರಿತು.

ಶ್ರೀ ಕುಂಬ್ಳೆ ಸುಂದರರಾವ್ (ಸೂರತ್ಕಲ್): ಮಾನ್ಯ ಅಧ್ಯಕ್ಷರೇ, ಸೂರತ್ಕಲ್ ವಿಧಾನಸಭಾ ಕ್ಷೇತ್ರದ ಎಂಆರ್‌ಪಿಎಲ್ ಸಂಸ್ಥೆಯವರಿಗೆ ಜಮೀನು ಬಿಟ್ಟವರ ಸಂಕಷ್ಟವನ್ನು ಸಭೆಯ ಮುಂಭಾಗದಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. 609 ಸಂತ್ರಸ್ಥ ಕುಟುಂಬದವರಿಗೆ ಚೆಳೆಯಾರಪದವು ಎಂಬ ಸ್ಥಳದಲ್ಲಿ ಪುನರ್‌ವಸತಿ ವ್ಯವಸ್ಥೆ ಮಾಡಿದೆ. ಆ ಪುನರ್ ವಸತಿ ವ್ಯವಸ್ಥೆಯಲ್ಲಿ ಕೆಐಎಡಿಬಿ ಯವರ ಜವಾಬ್ದಾರಿಯಿಂದ ಅವರಿಗೆ ಪ್ರಾಥಮಿಕ ಅವಶ್ಯಕತೆಯಾದ ನೀರನ್ನು ಒದಗಿಸಿಕೊಡುವುದಕ್ಕೆ ಇವತ್ತಿನವರೆಗೆ ಸಾಧ್ಯವಾಗಿಲ್ಲ. ಕೊಳವೆಬಾವಿಗಳನ್ನು ತೋಡುತ್ತಾರೆ. ಕೆಲವು ಬಾವಿಗಳಲ್ಲಿ ಉಪ್ಪು ನೀರು ಬರುತ್ತದೆ. ಕೆಲವು ಬಾವಿ ಬರಡಾಗುತ್ತದೆ. ಈಗ ಕೇವಲ ಎರಡು ಕೊಳವೆ ಬಾವಿಗಳ ಮೂಲಕ ಆ ಜನರು ಜೀವನ ಮಾಡುತ್ತಿದ್ದಾರೆ. ಮಳೆಗಾಲವಾದ್ದರಿಂದ ಅಲ್ಲಿ ಕೋಲಾಹಲ ಕಡಿಮೆಯಾಗಿದೆ. ಕಳೆದ ಬೇಸಿಗೆಯಲ್ಲಿ ಬಹಳ ಕೋಲಾಹಲವಾದಾಗ ನಾನು ಕಳೆದ ವಿಧಾನಸಭಾ ಅಧಿವೇಶನದಲ್ಲಿ ಈ ಪ್ರಶ್ನೆಯನ್ನು ಕೇಳಿದ್ದೆ. ಆಗ ಈ

ಕೆಐಎಡಿಬಿ ಯವರು ತಪ್ಪು ಮಾಹಿತಿಯನ್ನು ಕೊಟ್ಟು ನಮ್ಮ ಘನ ಉದ್ಯಮ ಮಂತ್ರಿಗಳಿಂದ ಆ ಉತ್ತರವನ್ನು ಕೊಡಿಸಿದರು. ನಾನು ಪುನಃ ಅವರಿಗೆ ವಿವರವನ್ನು ಹೇಳಿದಮೇಲೆ ಗಲಾಟೆ ಹೆಚ್ಚಾಯಿತು, ಕುಡಿಯುವುದಕ್ಕೆ ನೀರಿಲ್ಲ ಎಂತಾದಾಗ ಮತ್ತೆ ಅಲ್ಲಿ ಕೆಐಎಡಿಬಿ ಯವರು ಒಂದು ಬಾವಿಯನ್ನು ರಿಪೇರಿ ಮಾಡಿಕೊಟ್ಟರು. ಅದಲ್ಲದೆ ಈಗ ಬೇರೆ ಗತಿ ಇಲ್ಲ. ಮಳೆಗಾಲ ಮುಗಿದತಕ್ಷಣ ಅಲ್ಲಿ ಪುನಃ ಹಾಹಾಕಾರ ಉಂಟಾಗುತ್ತಿದೆ. ಕೆಐಎಡಿಬಿ ಯವರು ಜವಾಬ್ದಾರಿ ನಿರ್ವಹಿಸುತ್ತಿಲ್ಲ. ಇಷ್ಟು ದೊಡ್ಡ ಜಮೀನು ಒಂದೂವರೆ ಸಾವಿರ ಎಕರೆ ಜಮೀನನ್ನು ಯಾರು ಬಿಟ್ಟಿದ್ದಾರೆ. ಅವರಿಂದಾಗಿ ಪ್ರಯೋಜನ ಪಡೆಯುವ ಎಂಆರ್‌ಪಿಎಲ್ ಸಂಸ್ಥೆ ಏನಿದೆ, ಕೋಟ್ಯಾಂತರ ರೂಪಾಯಿ ಲಾಬ ಮಾಡುತ್ತಿದ್ದಾರೆ. ಅವರಿಗೆ ನೀರಿನ ಒಂದು ವ್ಯವಸ್ಥೆ ಮಾಡಿಕೊಡಿ ಎಂದು ಕೇಳಿದರೆ ಅದು ಕೊಡುತ್ತಿಲ್ಲ. ಆದ್ದರಿಂದ ಸಂಬಂಧಪಟ್ಟ ಈ ವಿಷಯದಲ್ಲಿ ಪ್ರಾಥಮಿಕ ಅವಶ್ಯಕತೆ, ನಾನು ದಾರಿ ಕೇಳುತ್ತಿಲ್ಲ. ಲೈಟ್ ಕೇಳುತ್ತಿಲ್ಲ ಕುಡಿಯುವ ನೀರನ್ನು ಕೇಳುತ್ತಿದ್ದೇನೆ. ಇದಕ್ಕೊಂದು ಪರ್ಮನೆಂಟ್ ಸಲ್ಯೂಷನ್ ಏನಾದರೂ ಮಾಡಿ ಕೊಡಬೇಕೆಂದು ಒತ್ತಾಯಿಸುತ್ತಿದ್ದೇನೆ.

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಈಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಹಲವಾರು ಭಾಗಗಳಲ್ಲಿ ಈ ಪರಿಸ್ಥಿತಿ ಇದೆ. ಕೊಳವೆ ಬಾವಿಗಳನ್ನು ತೆಗೆದಾದಮೇಲೆ ಅಲ್ಲಿ ಸಿಹಿ ನೀರು ಸಿಗುವುದಿಲ್ಲ. ಉಪ್ಪು ನೀರು ಮಾತ್ರ ಬೇಕಾದಷ್ಟು ಜಾಗದಲ್ಲಿ ಬರುತ್ತಿದೆ. ಈ ಹಿಂದೆ ಕೂಡ ನಾವು ಸಮಾರಂಭಕ್ಕೆ ಹೋದಾಗ ಪರಿಸ್ಥಿತಿ ನಿರ್ಮಾಣವಾಗಿದೆ. ಇಲ್ಲಿ 6 ಕೊಳವೆ ಬಾವಿಗಳನ್ನು ತೆಗೆದಿದ್ದಾರೆ. 2 ಕೊಳವೆಬಾವಿಗಳು ಮಾತ್ರ ಕೆಲಸ ಮಾಡುತ್ತಿವೆ. ಕೆಐಎಡಿಬಿಯವರು ಕೂಡ ಈ ಕೆಲಸವನ್ನು ಮಾಡಬೇಕು. ಹೇಗಾದರೂ ಮಾಡಿ ಇದಕ್ಕೆ ಶಾಶ್ವತ ಪರಿಹಾರವನ್ನು ಹುಡುಕಬೇಕಾಗುತ್ತದೆ. ನೀರನ್ನು ಯಾವ ಜಾಗದಿಂದ ತರಬೇಕಾಗುತ್ತದೆ ಮತ್ತು ಆ ನೀರನ್ನು ಯಾವ ರೀತಿ ಕೊಡಬೇಕಾಗುತ್ತದೆ ಎಂದು ಹೇಳುವಂಥದ್ದು ಏನಿದೆ, ಕೆಐಎಡಿಬಿ ಮತ್ತು ಜಿಲ್ಲಾ ಪಂಚಾಯತ್ ಜೊತೆ ಸಂಪರ್ಕ ಮಾಡಿ ಈ ಭಾಗಕ್ಕೆ ನೀರನ್ನು ಒದಗಿಸುವ ನಿಟ್ಟಿನಲ್ಲಿ ನಾವು ಸರ್ಕಾರದಿಂದ ಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ ಕುಂಬ್ಳೆ ಸುಂದರರಾವ್: ಮಾನ್ಯ ಅಧ್ಯಕ್ಷರು ಅಪ್ಪಣೆ ಕೊಟ್ಟರೆ ಒಂದು ವಾಕ್ಯ ಹೇಳುತ್ತೇನೆ.

ಅಧ್ಯಕ್ಷರು: ಹೇಳಿ.

ಶ್ರೀ ಕುಂಬ್ಳೆ ಸುಂದರರಾವ್: ಮಂಗಳೂರು ಮಹಾನಗರಪಾಲಿಕೆಯವರು ಇವರಿಗೆ ನೀರು ಕೊಡುವುದಕ್ಕೆ ತಯಾರಾಗಿದ್ದಾರೆ. ಡಿಪಾಸಿಟ್ ಕಟ್ಟುವವರು ಯಾರು ಎನ್ನುವ ಪ್ರಶ್ನೆ.ಎಂಆರ್‌ಪಿಎಲ್ ನವರು ಕೊಳವೆ ಹಾಕಿಕೊಡುತ್ತೇವೆ ಎಂದು ಹೇಳುತ್ತಾರೆಯೇ ಹೊರತು ಡಿಪಾಸಿಟ್ ಕಟ್ಟಲಿಕ್ಕೆ ತಯಾರಿಲ್ಲ. ಹಾಗೇನಾದರೂ ಮಾಡಿದರೆ

ಮಂಗಳೂರಿನಲ್ಲಿ ಸಾಕಷ್ಟು ನೀರಿದೆ. ಆ ನೀರನ್ನು ಇವರಿಗೆ ಕೊಡುವುದಕ್ಕೆ ಕಾರ್ಪೊರೇಷನ್ ಒಪ್ಪಿದೆ. ದುಡ್ಡು ಕಟ್ಟುವವರು ಯಾರು ಎಂಬ ಪ್ರಶ್ನೆಗೆ ಉತ್ತರ ಇರಲಾರದೆ ಕೆಲಸವಾಗಿಲ್ಲ.

ಶ್ರೀ ಎಂ.ಸಿ.ನಾಣಯ್ಯ: ಮಹಾನಗರಪಾಲಿಕೆಯವರು ನೀರನ್ನು ಕೊಡುವುದಕ್ಕೆ ತಯಾರಾಗಿದ್ದಾರೆ. ಮಲೆನಾಡು ಪ್ರದೇಶದಲ್ಲಿ 150-200 ಇಂಚು ಮಳೆ ಬೀಳುತ್ತದೆ. ಆದರೆ ಬಿಸಿಲುಗಾಲ ಬಂದರೆ ನೀರು ಇರುವುದಿಲ್ಲ. ಇದು ನಮ್ಮ ಪರಿಸ್ಥಿತಿ. ಇದು ಕೊಡಗಿನಲ್ಲೂ ಇದೆ. ಆದರೆ ಅವರ ಪರಿಸ್ಥಿತಿ ನನಗೆ ಗೊತ್ತಿದೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಅದಕ್ಕೆ ಕಾರಣವೇನು ಹೇಳಿ. ಮಳೆ ಬೇಸಿಗೆ ಕಾಲದಲ್ಲಿ, ಎಲ್ಲಿ ಜಾಸ್ತಿ ಬೀಳುತ್ತಿರುತ್ತದೆ, ಆ ಮಣ್ಣು ಬಹಳ ಬಿಗಿಯಾಗಿರುತ್ತೆ. ಅಲ್ಲಿ ನೀರಿನ ವ್ಯವಸ್ಥೆ ಕಡಿಮೆ ಇರುತ್ತದೆ.

ಶ್ರೀ ಎಂ.ಸಿ.ನಾಣಯ್ಯ: ಇದರ ಬಗ್ಗೆ ವಿಚಾರ ಮಾಡುತ್ತೇವೆ.

ಊ) ಉಳ್ಳಾಲ ಕ್ಷೇತ್ರದ ಬಜಾಲು ಗ್ರಾಮವನ್ನು ಮಂಗಳೂರು ಮಹಾನಗರಪಾಲಿಕೆಗೆ ಸೇರಿಸುವುದು.

ಶ್ರೀ ಕೆ.ಜಯರಾಮಶೆಟ್ಟಿ(ಉಳ್ಳಾಲ): ಮಾನ್ಯ ಅಧ್ಯಕ್ಷರೇ, ಉಳ್ಳಾಲ ವಿಧಾನಸಭಾ ಕ್ಷೇತ್ರದಲ್ಲಿ ಗ್ರಾಮಾಂತರ ಪ್ರದೇಶಗಳು, ನೇತ್ರಾವತಿಯ ಒಂದು ಭಾಗದಲ್ಲಿ ನಗರಪ್ರದೇಶಗಳು, ನೇತ್ರಾವತಿಯ ಇನ್ನೊಂದು ಭಾಗದಲ್ಲಿದೆ. ನಗರಪ್ರದೇಶಕ್ಕೆ ತಾಗಿಕೊಂಡು ನನ್ನ ಕ್ಷೇತ್ರದಲ್ಲಿ ಬಜಾಲು ಗ್ರಾಮವೆಂಬ ಗ್ರಾಮಪಂಚಾಯಿತಿ ಇದೆ. ಈಗ ಇದರ ಜನಸಂಖ್ಯೆ ಸುಮಾರು 25 ಸಾವಿರ. ಇಲ್ಲಿ ಪೂರ್ಣ ಪ್ರಮಾಣದಲ್ಲಿ ಕುಡಿಯುವ ನೀರಿನ ತೊಂದರೆ ಇದ್ದುದ್ದರಿಂದ ಹಿಂದೆ ಮಂಗಳೂರು ಮಹಾನಗರ ಪಾಲಿಕೆಯವರು ಇಲ್ಲಿಗೆ ನೀರನ್ನು ಒದಗಿಸಿಕೊಟ್ಟು ಸುಮಾರು 7 ಲಕ್ಷ ರೂಪಾಯಿ ಗ್ರಾಮ ಪಂಚಾಯಿತಿಯು ನಗರಪಾಲಿಕೆಗೆ ಕೊಡಲಿಕ್ಕೆ ಬಾಕಿ ಇತ್ತು. ಆದರೆ ಈಗ ಕಳೆದ ಅಧಿವೇಶನದಲ್ಲಿ ನಾನು ರಾಜ್ಯಸರ್ಕಾರವನ್ನು ವಿನಂತಿ ಮಾಡಿದ್ದೇನೆ. ಆ ಗ್ರಾಮಪಂಚಾಯಿತಿ ಕೂಡ ಅದನ್ನು ಮಂಗಳೂರು ಮಹಾನಗರಪಾಲಿಕೆಯಲ್ಲಿ ವಿಲೀನಗೊಳಿಸಲಿಕ್ಕೆ ಒಂದು ನಿರ್ಣಯವನ್ನು ತೆಗೆದುಕೊಂಡಿತ್ತು. ಮಂಗಳೂರು ಮಹಾನಗರಪಾಲಿಕೆ ಕೂಡ ಒಂದು ನಿರ್ಣಯವನ್ನು ತೆಗೆದುಕೊಂಡು ಬಜಾಲು ಗ್ರಾಮವನ್ನು ಮಂಗಳೂರು ಮಹಾನಗರಪಾಲಿಕೆಯಲ್ಲಿ ವಿಲೀನಗೊಳಿಸುವ ಬಗ್ಗೆ ಒಪ್ಪಿಗೆಯನ್ನು ಕೂಡ ಕೊಟ್ಟಿತ್ತು. ಆದರೆ ಇಷ್ಟರವರೆಗೆ ಬಜಾಲು ಗ್ರಾಮವು ಮಂಗಳೂರು ಮಹಾನಗರಪಾಲಿಕೆಯಲ್ಲಿ ಸೇರ್ಪಡೆಗೊಂಡಿಲ್ಲ. ಜೊತೆಗೆ ಈಗ ಹೊಸ ಗ್ರಾಮಪಂಚಾಯಿತಿಗಳ ವಿಂಗಡಣೆಯಾಗುವ ಸಂದರ್ಭದಲ್ಲಿ ಈಬಜಾಲು ಗ್ರಾಮವನ್ನು